ಹೊಗೆನೇಕಲ್ ಬಳಿಯಲ್ಲಿನ ಕರ್ನಾಟಕ ಪ್ರದೇಶ ತಮಿಳುನಾಡಿನವರಿಂದ ಒತ್ತುವರಿ

764(519) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ;

ಅ) ಹೊಗೆನೇಕಲ್ ಬಳಿಯಲ್ಲಿನ ಕರ್ನಾಟಕ ಪ್ರದೇಶವನ್ನು ತಮಿಳುನಾಡಿನವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಹೊಗೆನೇಕಲ್ ಬಳಿಯಲ್ಲಿನ ಕರ್ನಾಟಕ ಪ್ರದೇಶವನ್ನು ತಮಿಳುನಾಡಿನವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು. ಕರ್ನಾಟಕ ಸರ್ಕಾರವು ಈ ಸಂಬಂಧ ದಿನಾಂಕ : 10–03–2006 ರಂದು ಎರಡೂ ರಾಜ್ಯಗಳ ಅಧಿಕಾರಿಗಳ ಸಭೆ ನಡೆಸಿ ತೀರ್ಮಾನಿಸಿದಂತೆ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಬೆಂಗಳೂರು ರವರು ದಿನಾಂಕ : 05–04–2006 ರಂದು ಮುಖ್ಯ ಕಾರ್ಯದರ್ಶಿಗಳು, ತಮಿಳುನಾಡು ಸರ್ಕಾರ ಚನ್ನೈ ಇವರಿಗೆ ಪತ್ರ ಬರೆದಿರುತ್ತಾರೆ. ಅದರಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗಡಿ ಅಳತೆ ಜಂಟಿ ಸರ್ವೆಗೆ ಅನುಮತಿ ನೀಡಿದ್ದು, ಅಳತೆ ಕೆಲಸವನ್ನು ಗುಂಡ್ಲುಪೇಟೆ ತಾಲ್ಲೂಕು ಬೇರಂಬಾಡಿ, ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿರುವ ಟ್ರೈಜೆಂಕ್ಷನ್ ಪಾಯಿಂಟ್‌ನಿಂದ ಮತ್ತು ಹೊಗೇನಕಲ್ ಫಾಲ್ಸ್ ಹತ್ತಿರವಿರುವ ಬಿಳಿಗುಂಡ್ಲುವಿನ ಬೈ ಜೆಂಕ್ಷನ್ ಪಾಯಿಂಟ್‌ನಿಂದ ಸರ್ವೆ ಕೆಲಸ ಪ್ರಾರಂಭಿಸಲು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಿಂದ 2 ಸರ್ವೆ ತಂಡಗಳನ್ನು ರಚನೆ ಮಾಡಿರುತ್ತದೆ. ಮೈಸೂರಿನ ಸರ್ವೆ ತರಬೇತಿ ಸಂಸ್ಥೆಯ ಪ್ರಾಂಶುಪಾಲರನ್ನು ಜಂಟಿ ಸರ್ವೆ ಕಾರ್ಯಕ್ಕೆ ಸಮನ್ವಯಾಧಿಕಾರಿಯಾಗಿ ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿಗಳನ್ನು ಮೇಲುಸ್ತುವಾರಿ ಅಧಿಕಾರಿಯನ್ನಾಗಿ

ನೇಮಕಮಾಡಿರುತ್ತದೆ. ಅದರಂತೆ ಮೈಸೂರು ಸರ್ವೆ ತರಬೇತಿ ಸಂಸ್ಥೆಯಲ್ಲಿ ದಿನಾಂಕ : 10–03–2006 ರಂದು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕರ್ನಾಟಕ ಮತ್ತು ತಮಿಳುನಾಡು ಸರ್ವೆ ಸಭೆಯನ್ನು ಅಧಿಕಾರಿಗಳ ಸಭೆಯನ್ನು ಕರೆದು ದಿನಾಂಕ : 05–04–2006 ರಿಂದ ಜಂಟಿ ಸರ್ವೆ ಕಾರ್ಯ ಪ್ರಾರಂಭಿಸಲು ನಿರ್ಣಯಿಸಲಾಗಿತ್ತು. ನಂತರ ತಮಿಳುನಾಡು ಸರ್ಕಾರದ ಸಂಬಂಧಪಟ್ಟ ಸರ್ವೆ ಅಧಿಕಾರಿಗಳಿಂದ ಅಗತ್ಯ ಸಹಕಾರ ದೊರೆಯದೆ ಇದ್ದ ಕಾರಣ ಜಂಟಿ ಸರ್ವೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಪುನಃ ದಿನಾಂಕ :13–09–2007 ರಂದು ಮೈಸೂರಿನ ಸರ್ವೆ ತರಬೇತಿ ಸಂಸ್ಥೆಯಲ್ಲಿ ಕರೆದಿದ್ದ ಸಭೆಗೆ ತಮಿಳುನಾಡಿನ ಸರ್ವೆ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ. ಈ ಸಂಬಂಧ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಇವರು ತಮಿಳುನಾಡು ಸರ್ಕಾರದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ದಿನಾಂಕ : 06–03–2008 ರಂದು ಪತ್ರ ಬರೆದು ಸರ್ವೆ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಜಂಟಿ ಸರ್ವೆ ಕಾರ್ಯಕ್ಕೆ ನಿಯೋಜಿಸುವಂತೆ ಕೋರಿರುತ್ತಾರೆ. ಜಂಟಿ ಸರ್ವೆ ಕೆಲಸದ ಪ್ರಾಮುಖ್ಯತೆಯನ್ನು ಮತ್ತು ಇದರಿಂದ ಎರಡೂ ರಾಜ್ಯಗಳಿಗೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಲಾಭವಾಗುವ ಪ್ರಯೋಜನಗಳನ್ನು ತಮಿಳುನಾಡು ಸರ್ಕಾರಕ್ಕೆ ಮನವರಿಕೆ ಮಾಡಲಾಗಿದೆ. ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ದಿನಾಂಕ : 23–06–2008 ರಂದು ಡೈರೆಕ್ಟರ್ ಜನರಲ್ ಸರ್ವೆ ಆಫ್ ಇಂಡಿಯಾ, ಹೈದರಾಬಾದ್, ಇವರಿಗೆ ಪತ್ರ ಬರೆದು ಭಾರತೀಯ ಸರ್ವೇಕ್ಷಣ ತಂಡದಿಂದ ಸ್ವತಂತ್ರವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗಡಿ ಜಂಟಿ ಸರ್ವೆ ಕಾರ್ಯವನ್ನು ಬೇರೆ ರಾಜ್ಯಗಳ ಸರ್ವೆ ತಂಡದಿಂದ ಪ್ರಾರಂಭಿಸಲು ಕೋರಿರುತ್ತಾರೆ. ಈ ಸಂಬಂಧ ಕರ್ನಾಟಕ ಸರ್ಕಾರದಿಂದ ಭರಿಸಬೇಕಾದ ವೆಚ್ಚದ ವಿವರವನ್ನು ತಿಳಿಸಲು ಕೋರಲಾಗಿದೆ. ಅದರಂತೆ ಕರ್ನಾಟಕ ಸರ್ಕಾರವು ವಿಶೇಷ ಅಧ್ಯತೆಯನ್ನು ಜಂಟಿ ಸರ್ವೆ ಕಾರ್ಯಕ್ಕೆ ನೀಡಿದೆ.